# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು-570 006

**ಪ್ರವೇಶಾತಿ ವಿಭಾಗ**

**Website: www.ksoumysuru.ac.in** **Mail Id:admksou@gmail.com**


ಸಂಖ್ಯೆ: ಕರಾಮುವಿ/ಪ್ರವಿ/ಎಡಿಎಂ-1/168/2026-27. ದಿನಾಂಕ: 20.06.2026

**ಸುತ್ತೋಲೆ:**

**ವಿಷಯ: 2026-27ರ ಜುಲೈ ಆವೃತ್ತಿಯ ಪ್ರವೇಶಾತಿಯನ್ನು ಪ್ರಾರಂಭಿಸುತ್ತಿರುವ ಬಗೆಗೆ:**

**ಉಲ್ಲೇಖ:** 1. ಪ್ರವೇಶಾತಿ ಅಧಿಸೂಚನೆಯ ಸಮಸಂಖ್ಯೆ, ದಿನಾಂಕ: 20.06.2026
2. ಪ್ರವೇಶಾತಿ ಶುಲ್ಕ ನಿಗದಿ ಆದೇಶದ ಸಮಸಂಖ್ಯೆ, ದಿನಾಂಕ: 20.06.2026

*****

ಯುಜಿಸಿ ಅನುಮೋದಿತ ಸ್ನಾತಕ / ಸ್ನಾತಕೋತ್ತರ ಓಡಿಎಲ್ ಪದವಿ ಕಾರ್ಯಕ್ರಮಗಳಿಗೆ ಹಾಗೂ ಡಿಪ್ಲೋಮಾ ಮತ್ತು ಸರ್ಟಿಫಿಕೇಟ್ ಶೈಕ್ಷಣಿಕ ಕಾರ್ಯಕ್ರಮಗಳಿಗೆ 2026-27ರ ಜುಲೈ ಆವೃತ್ತಿಯ ಪ್ರವೇಶಾತಿಯನ್ನು ಕೇಂದ್ರ ಕಚೇರಿ ಮೈಸೂರು ಮತ್ತು ವಿವಿಯ 38 ಪ್ರಾದೇಶಿಕ ಕೇಂದ್ರಗಳಲ್ಲಿ **ದಿನಾಂಕ: 22.06.2026ರಿಂದ ಪ್ರಾರಂಭಿಸಲಾಗುತ್ತಿದ್ದು,** ಈ ಸಂಬಂಧ ಉಲ್ಲೇಖ(1)ರ ಪ್ರವೇಶಾತಿ ಅಧಿಸೂಚನೆಯನ್ನು ಹೊರಡಿಸಿದ್ದು, ಉಲ್ಲೇಖ (2)ರ ಪ್ರವೇಶಾತಿ ಶುಲ್ಕ ನಿಗದಿಗೊಳಿಸಿ ಆದೇಶ ಹೊರಡಿಸಿದೆ.

ಪ್ರವೇಶಾತಿ ಆದೇಶ ಹಾಗೂ ಪ್ರವೇಶಾತಿ ಶುಲ್ಕ ನಿಗದಿ ಆದೇಶಗಳನ್ನು ವಿವಿಯ ಅಧಿಕೃತ ಅಂತರ್ಜಾಲದಲ್ಲಿ ಪ್ರಕಟಗೊಳಿಸಿದ್ದು, ವಿವಿಯ ಎಲ್ಲಾ ಅಧ್ಯಯನ ವಿಭಾಗಗಳು ಮತ್ತು ಆಡಳಿತಾತ್ಮಕ ವಿಭಾಗಗಳು ಗಮನಿಸಿ ಡೌನ್ ಮಾಡಿಕೊಂಡು ವಿದ್ಯಾರ್ಥಿಗಳು/ಸಾರ್ವಜನಿಕರು / ಆಸಕ್ತರಿಗೆ ಅಗತ್ಯ ಮಾಹಿತಿ ನೀಡುವ ಮೂಲಕ ಶೈಕ್ಷಣಿಕ ಸೇವೆಯನ್ನು ನೀಡುವ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತರಾಗಬೇಕೆಂದು ಈ ಮೂಲಕ ತಿಳಿಸಲಾಗಿದೆ.

ಹೆಚ್ಚಿನ ಮಾಹಿತಿಗೆ ಪ್ರವೇಶಾತಿ ವಿಭಾಗದ ಅಧಿಕಾರಿಗಳ ಸಂಖ್ಯೆಗಳಿಗೆ 9945366062/ 9113512565/ 9611418726/ 9686576399/9035395137/8123469017/9844010407ಗೆ ಸಂಪರ್ಕಿಸುವುದು.

**ಕುಲಸಚಿವರು**

ಗೆ:

1. ಎಲ್ಲಾ ಶಾಸನಬದ್ಧ ಅಧಿಕಾರಿಗಳು, ಕರಾಮುವಿ, ಮೈಸೂರು.
2. ಡೀನ್(ಅಧ್ಯಯನ ಕೇಂದ್ರಗಳು), ಕರಾಮುವಿ, ಮೈಸೂರು. – ಇವರ ಮಾಹಿತಿಗೆ ಅಧಿಕೃತ ಕಲಿಕಾರ್ಥಿ ಸಹಾಯ ಕೇಂದ್ರಗಳ ಗಮನಕ್ಕೆ ತಂದು ವಿವಿಯ ನಿಲಯಮಗಳಡಿಯಲ್ಲಿ ಕಾರ್ಯಪ್ರವೃತ್ತರಾಗುವಂತೆ ತಿಳಿಸಿದೆ.
3. ಎಲ್ಲಾ ಪ್ರಾದೇಶಿಕ ನಿರ್ದೇಶಕರುಗಳು, ಕರಾಮುವಿ ಪ್ರಾದೇಶಿಕ ಕೇಂದ್ರಗಳು – ಮೇಲ್ ಮೂಲಕ - ಪ್ರವೇಶಾತಿ ಮಾಹಿತಿಯನ್ನು ತಮ್ಮ ಕೇಂದ್ರದ ವ್ಯಾಪ್ತಿಯಲ್ಲಿ ಹೆಚ್ಚಿನ ಪ್ರಚಾರ ಮಾಡುವುದು ಮತ್ತು ತಮ್ಮಲ್ಲಿ ಮಾತ್ರವೇ ಪ್ರವೇಶಾತಿ ಮಾಡಿಕೊಳ್ಳುವುದು.
4. ಎಲ್ಲಾ ಸಂಯೋಜನಾಧಿಕಾರಿಗಳು, ಕರಾಮುವಿ ಕಲಿಕಾರ್ಥಿ ಸಹಾಯ ಕೇಂದ್ರಗಳು – ಮೇಲ್ ಮೂಲಕ - ಪ್ರವೇಶಾತಿ ಮಾಹಿತಿಯನ್ನು ಹಾಗೂ ಆಯಾ ಶಿಕ್ಷಣಕ್ರಮಗಳಿಗೆ ವಿವಿ ನಿಲಯವು ನಿಗದಿಪಡಿಸಿರುವ ಪ್ರವೇಶಾತಿ ಶುಲ್ಕದ ಮಾಹಿತಿಯನ್ನು ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ ತಿಳಿಸುವುದು ಹಾಗೂ ತಮ್ಮ ಕೇಂದ್ರದ ಸೂಚನಾ ಫಲಕದಲ್ಲಿ ಪ್ರಕಟಿಸುವುದು ಹಾಗೂ ತಮ್ಮ ಕೇಂದ್ರದ ವ್ಯಾಪ್ತಿಯಲ್ಲಿ ಹೆಚ್ಚಿನ ಪ್ರಚಾರ ಮಾಡುವುದು. ಪ್ರವೇಶಾತಿ ಪೂರ್ವ ಸಮಾಲೋಚನೆ (Admission Pre Counseling only) ಮಾತ್ರ ಮಾಡುವುದು. ಯಾವುದೇ ಕಾರಣದಿಂದಲು ಪ್ರವೇಶಾತಿ ಮಾಡಲಾಗುವುದೆಂದು ವಿದ್ಯಾರ್ಥಿಯಿಂದ ಪ್ರವೇಶಾತಿ ಶುಲ್ಕ ಪಡೆಯುವುದು ಅಥವಾ ವಿದ್ಯಾರ್ಥಿಯ ಪರವಾಗಿ ಹಣ ಪಾವತಿಸುವುದು, ವಿದ್ಯಾರ್ಥಿಯ ಪರವಾಗಿ ಲಾಗಿನ್ ಮೂಲಕ ಪ್ರವೇಶಾತಿ ಮಾಡುವಂತಿಲ್ಲ.

5. ಎಲ್ಲಾ ಅಧ್ಯಯನ ವಿಭಾಗಗಳ ಮುಖ್ಯಸ್ಥರು, ಕರಾಮುವಿ - – ಮೇಲ್ ಮೂಲಕ
6. ಎಲ್ಲಾ ನಿರ್ದೇಶಕರುಗಳು / ವಿಶೇಷಾಧಿಕಾರಿಗಳು / ಸಂಯೋಜನಾಧಿಕಾರಿಗಳು/ವಿದ್ಯಾರ್ಥಿ ಕ್ಷೇಮಪಾಲನಾ ಅಧಿಕಾರಿಗಳು - ಕರಾಮುವಿಯಲ್ಲಿನ ವಿವಿಧ ವಿಭಾಗಗಳು. – ಮೇಲ್ ಮೂಲಕ...
7. ನಿರ್ದೇಶಕರು-ಐಟಿ, ಕರಾಮುವಿ, ಮೈಸೂರು.
8. ಎಲ್ಲಾ ಉಪಕುಲಸಚಿವರು / ಸಹಾಯಕ ಕುಲಸಚಿವರು ಕರಾಮುವಿಯಲ್ಲಿನ ವಿವಿಧ ವಿಭಾಗಗಳು. – ಮೇಲ್ ಮೂಲಕ.
9. ಸಂಯೋಜನಾಧಿಕಾರಿಗಳು, ವಿದ್ಯಾರ್ಥಿ ವೇತನ ಘಟಕ, ಕರಾಮುವಿ - – ಮೇಲ್ ಮೂಲಕ
10. ಡಾ:ಸಿ.ಜಿ.ನವೀನ್ ಕುಮಾರ್, ಸಂಯೋಜನಾಧಿಕಾರಿಗಳು, ವಿವಿ ಅಂತರ್ಜಾಲ ನಿರ್ವಹಣೆ, ಕರಾಮುವಿ - ಇವರಿಗೆ ಪ್ರವೇಶಾತಿ ಸದರಿ ಅಧಿಸೂಚನೆ, ಶುಲ್ಕ ನಿಗದಿ ಆದೇಶಗಳನ್ನು ವಿವಿಯ ಅಧಿಕೃತ ಅಂತರ್ಜಾಲದಲ್ಲಿ ತುರ್ತಾಗಿ ಅಪ್‌ಲೋಡ್ ಮಾಡುವುದು ಮತ್ತು ಈ ಅಧಿಸೂಚನೆ ಹಾಗೂ ಜಾಹೀರಾತು ಪ್ರಕಟಣೆಯನ್ನು ವಿವಿಯ KSOU Digital Academic Platform App ನಲ್ಲಿ ಅಪ್‌ಲೋಡ್ ಮಾಡುವುದು.
11. ವಿಶೇಷಾಧಿಕಾರಿಗಳು, ಮಾನ್ಯ ಕುಲಪತಿಗಳ ಆಪ್ತಶಾಖೆ, ಕರಾಮುವಿ, ಮೈಸೂರು.
12. ಇನ್‌ಹಾಕ್ ಐಟಿ ಸಲ್ಯೂಷನ್ಸ್ ಪ್ರತಿನಿಧಿಗಳು – ಆಫ್‌ಲೈನ್ ಶಿಕ್ಷಣಕ್ರಮಗಳ ಪ್ರವೇಶಾತಿ ಪ್ರಕ್ರಿಯೆಯ ನಿರ್ವಹಣೆ ಇವರಿಗೆ – ಕೇಂದ್ರ ಕಚೇರಿ ಮೈಸೂರು ಹಾಗೂ ವಿವಿಯ ಅಧಿಕೃತ ಪ್ರಾದೇಶಿಕ ಕೇಂದ್ರಗಳಲ್ಲಿ ಮಾತ್ರವೇ ಪ್ರವೇಶಾತಿಗೆ ಅವಕಾಶ ಕಲ್ಪಿಸುವುದು. ಕಲಿಕಾರ್ಥಿ ಸಹಾಯ ಕೇಂದ್ರಗಳ ಮೂಲಕ ಲಾಗಿನ್ ಬಳಸಿ ಪ್ರವೇಶಾತಿ ಮಾಡಲು ಅವಕಾಶ ಕಲ್ಪಿಸದಿರಲು ಸೂಚಿಸಿದೆ.
13. ಎಲ್ಲಾ ಅಧೀಕ್ಷಕರು / ಕಾರ್ಯನಿರ್ವಾಹಕರು, ಪ್ರವೇಶಾತಿ ವಿಭಾಗ, ಕರಾಮುವಿ, ಮೈಸೂರು.
14. ವಿವಿ ನಿಲಯದ ಸೂಚನಾ ಫಲಕಗಳು / ಮಾಹಿತಿ ಮತ್ತು ಮಾರ್ಗದರ್ಶಕ ಘಟಕ, ಪ್ರವೇಶಾತಿ ವಿಭಾಗ, ಕರಾಮುವಿ.
15. ಕಚೇರಿ ಪ್ರತಿ. 16.ರಕ್ಷಾ ಕಡತ